ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ

509 (1083) ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಲು ಖಾಸಗಿಯವರು ಮುಂದೆ ಬಂದಿದ್ದಾರೆಯೇ?

ಆ) ಮೇಲ್ಕಂಡ ಶಾಲೆಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಡಿ.ಡಿ.ಡಿ.ಐ.ಗಳಿಗೆ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಆಂಗ್ಲ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವಲ್ಲಿ ಮಲತಾಯಿ ಧೋರಣೆಯನ್ನು ಸರ್ಕಾರ ಏಕೆ ಅನುಸರಿಸುತ್ತಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಬಂದಿದ್ದಾರೆ.

ಆ) ಇಲ್ಲ.

ಇ) ಆಂಗ್ಲ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವ ಬಗ್ಗೆ ಸರ್ಕಾರದ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿಲ್ಲ. ತಜ್ಞರ ಸಮಿತಿ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜು ಮಾಡುವುದು

512 (322). ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿಗ್ಗಾಂವ್ ಹಾಗೂ ಸವಣೂರು ತಾಲ್ಲೂಕುಗಳಲ್ಲಿ 33 ಕೆ.ವಿ.ಸ್ಟೇಷನ್ ಇರುವ ಕಾರಣ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಲಾಖೆಯಲ್ಲಿ ವಿದ್ಯುತ್ ಸರಬರಾಜು ಮಾಡುವಲ್ಲಿ ತೊಂದರೆಯಾಗಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 110ಕೆ.ವಿ.ಸ್ಟೇಷನ್‌ಗಳನ್ನು ಲಲ್ಲಿ ಪ್ರಾರಂಭಿಸಲು ಎಷ್ಟು ಸಮಯದಲ್ಲಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಹೌದು.

ಆ) ಶಿಗ್ಗಾಂವ್‌ನಲ್ಲಿ ಈಗ ಇರುವ 33:11 ಕೆ.ವಿ. ಸಬ್-ಸ್ಟೇಷನ್‌ನಲ್ಲಿ ಎರಡನೇ 5ಎಂಎ ಪ್ರಾನ್ಸ್‌ಫಾರ್ಮರನ್ನು ಹಾಕುವ ಪ್ರಸ್ತಾವನೆ ಇದೆ. ಆದರೆ ಇಲ್ಲಿ, 110 ಕೆ.ವಿ. ಸ್ಟೇಷನ್ ಹಾಕುವ ಯೋಜನೆ ಇರುವುದಿಲ್ಲ.

ಸವಣೂರಿನಲ್ಲಿ 33:11 ಕೆ.ವಿ.ಸಬ್-ಸ್ಟೇಷನ್‌ನಲ್ಲಿ ಎರಡನೇ 5 ಎಂಎವಿಯ ಟ್ರಾನ್ಸ್‌ಫಾರ್ಮರ್ ಹಾಕುವ ಪ್ರಸ್ತಾಪನೆ ಇದೆ. ಆದರೆ ಸವಣೂರಿನಲ್ಲಿ, 110:11 ಕೆ.ವಿ. ಸ್ಟೇಷನ್ ಹಾಕುವ ಪ್ರಸ್ತಾವನೆಯಿಲ್ಲ.

ಸವಣೂರು ಸಮೀಪ ಹಾತಮೂತ್ತೂರಿನಲ್ಲಿ ಒಂದು 33.11 ಕೆ.ವಿ.ಸ್ಟೇಷನ್ ಹಾಕುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.